ಯಾವುದು ಲಾಸ್ಟ್ ನಂಬರ್ ಬಂದಿದೆ, ಆ ಜಿಲ್ಲೆಗೆ ಹೆಚ್ಚು ಒತ್ತನ್ನು [illegible] ಎಲ್ಲಾ ರೀತಿಯಿಂದ ಅನುಕೂಲಗಳನ್ನು ಮಾಡಿ ಬರುವಂಥ ದಿನಗಳಲ್ಲಿ ಉತ್ತಮವಾದ ರಿಸಲ್ಟ್ ಬರುವಂತೆ ಮಾಡಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಮುಕ್ತಾಯಗೊಳಿಸಲಾಗಿದೆ. ಇನ್ನು ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿ. ದಯಮಾಡಿ ಸಹಕರಿಸಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, 22.3.2006ರ ಎರಡನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 34 ಪ್ರಶ್ನೆಗಳಲ್ಲಿ 28 ಉತ್ತರಗಳನ್ನು ಸದನದಲ್ಲಿ ಮಂಡಿಸಿರುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ–I)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಗೈರುಹಾಜರಿ ಬಗ್ಗೆ.

ಅಧ್ಯಕ್ಷರು : ಈಗ ಆಯವ್ಯಯದ ಮೇಲೆ ಚರ್ಚೆ ಆರಂಭವಾಗುತ್ತದೆ. ಮೊದಲಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧ ಪಕ್ಷದ [illegible]ರು ಆಯವ್ಯಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿ ಮಾನ್ಯ ಮು[illegible]ಗಳಾಗಲೀ, ಉಪ ಮುಖ್ಯಮಂತ್ರಿಗಳಾಗಲಿ ಇಲ್ಲ, ಯಾರೂ ಇಲ್ಲ ಎಂದರೆ ಹೇಗೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದರು, [illegible] ಹೋಗಿದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಪ್ರಶ್ನೋತ್ತರ ಇರುವುದರಿಂದ ಅಲ್ಲಿದ್ದಾರೆ. ಮುಖ್ಯಮಂತ್ರಿಗಳವರನ್ನು ಕರೆಸುತ್ತೇನೆ. ಆಯಿತು, ಬರುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧ ಪಕ್ಷದ ನಾಯಕರು ಅಂದರೆ ಮರ್ಯಾದೆಯಿಲ್ಲವೇ? ಏತಕ್ಕೆ ಹೀಗೆ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ಏನರ್ಥ?

ಅಧ್ಯಕ್ಷರು : ಆಯಿತು, ನೀವು ಕುಳಿತುಕೊಳ್ಳಿ, ಅವರು ಬರುತ್ತಾರೆ. ಹೇಳಿಕಳುಹಿಸಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿನ್ನೆ ತಾನೆ ತಾವು [illegible], ಆದರೂ ಅವರಿಗೆ ತಿಳಿಯುವುದಿಲ್ಲ ಎಂದರೆ ಏನರ್ಥ?

ಅಧ್ಯಕ್ಷರು : ನೋಡಿ ನಿಮ್ಮ ಡಿ.ಸಿ.ಎಮ್. ಮೇಲ್ಮನೆಯಲ್ಲಿದ್ದಾರೆ, ಸಂಸದೀಯ ಸಚಿವರೇ ಮುಖ್ಯಮಂತ್ರಿಯವರನ್ನು ಕರೆಸಿ.

ಶ್ರೀ ಆರ್. ರೋಷನ್‌ಬೇಗ್ : ಅಧಿಕಾರಿಗಳು ಎಲ್ಲಿದ್ದಾರೆ? where is the Chief Secretary and Finance Secretary?